## ಕವಿತೆ



ಮೂಲ: **ರವೀಂದ್ರನಾಥ ಟ್ಯಾಗೋರ್**

ಕನ್ನಡಕ್ಕೆ: **ಚೈತ್ರಾ ಶಿವಯೋಗಿಮಠ**

ಕಲೆ: ಎಸ್.ವಿ. ಹೂಗಾರ್



# ಅಮರ ಪ್ರೇಮ

ನಾನು ನಿನ್ನನ್ನು
ಪ್ರೇಮಿಸಿರುವಂತೆ ತೋರುವುದು
ಅಸಂಖ್ಯಾತ ರೂಪಗಳಲ್ಲಿ
ಅಸಂಖ್ಯಾತ ಬಾರಿ
ಪ್ರತಿ ಜನುಮದಲ್ಲೂ
ಪ್ರತಿ ಜೀವಿತದಲ್ಲೂ
ಎಂದೆಂದಿಗೂ

ಮಂತ್ರಮುಗ್ಧವಾದ ಈ ಹೃದಯ
ನಿನ್ನ ಉಡುಗೊರೆಗಾಗಿ
ಮತ್ತೆ ಮತ್ತೆ ಶಬ್ದಗಳ ಹಾರ ಕಟ್ಟುವುದು
ಧರಿಸುವೆ ನಿನ್ನ ಕೊರಳ ಸುತ್ತ
ಪ್ರತಿ ಜನುಮದಲ್ಲೂ
ಪ್ರತಿ ಜೀವಿತದಲ್ಲೂ
ಎಂದೆಂದಿಗೂ

ಪ್ರೇಮದ ಬಗೆಗಿನ ಆಖ್ಯಾನ
ಕೇಳಿದಾಗಲೆಲ್ಲಾ
ಅದಾವುದೋ ಶತಮಾನದ
ನೋವು, ವಿರಹದ ತಾಪ

ನೆನಪುಗಳನ್ನೇ ದಿಟ್ಟಿಸುತ್ತಾ ಕೂರುವೆ
ಧ್ರುವ ತಾರೆಯ ಬೆಳಕು ಹೊದ್ದ ನೀನು
ಕಾಲದ ಕತ್ತಲೆಯನ್ನ ಸೀಳಿ ಬರುವೆ
ನೀನು ಸದಾಕಾಲವೂ ನೆನಪಿನಲ್ಲುಳಿಯುವ
ಕಣ್ಣಗೊಂಬಿಯಲಿ ಸೆರೆಯಾದ ಚಿತ್ರವಾಗುವೆ

ಪರಸ್ಪರರ ಪ್ರೇಮದ ನೆವದಲಿ
ನಾನು ನೀನು ತೇಲಾಡಿದೆವು
ಚಿಲುಮೆಯಿಂದುಕ್ಕಿ
ಹರಿಯುವೀ ಒಲವ ತೊರೆಯಲಿ
ಈ ಪ್ರೇಮದ ಹೊಳೆಯ ನಟ್ಟನಡುವಲಿ

ಅದೆಷ್ಟೋ ಸಹಸ್ರ ಪ್ರೇಮಿಗಳಂತೆ
ನಮ್ಮದೂ
ಅದೇ ಪ್ರೇಮದ ಸವಿ
ಅದೇ ಮಿಲನದ ಲಜ್ಜೆ
ಅದೇ ವಿರಹದ ಕಣ್ಣೀರು
ಎಲ್ಲವೂ ಅದೇ ಹಳೆ
ಪ್ರೇಮ ಕಥೆಯ ಹಾಗೆಯೇ
ಆದರೆ ಮತ್ತೆ
ಹೊಸ ರೂಪ ತಳೆದಂತೆ
ಸದಾ

ಇಂದು ಈ ಜಗದೆಲ್ಲ ಪ್ರೇಮವೂ
ಎಲ್ಲವೂ ನಿನ್ನ ಚರಣದಲ್ಲಿ
ನಿನ್ನನ್ನೇ ತಲುಪಿ ನಿನ್ನಲ್ಲೇ ಐಕ್ಯವಾಗಿವೆ
ಅನಂತ ನಲಿವು ಅನಂತ ನೋವು ಅನಂತ
ಬದುಕು

ನಮ್ಮೀ ಪ್ರೇಮದೊಳು
ಜಗದೆಲ್ಲ ಒಲವ ನೆನಹುಗಳು
ಗತದೆಲ್ಲ ಕವಿ ಹಾಡೂ
ಕಲೆಸಿ ಹೋಗಿವೆ ಎಂದೆಂದಿಗೂ

